## ಬೆಳದಿಂಗಳ ಸಂಗೀತ 193

**4 ನವೆಂಬರ್ 2017**

## ದ್ವಂದ್ವ ವಯೊಲಿನ್ ವಾದನ

ಖ್ಯಾತ ವಯೊಲಿನ್ ವಿದ್ವಾಂಸರಾದ
ಮೈಸೂರು ಶ್ರೀ ಎಸ್. ಮಹದೇವಪ್ಪನವರ
ಮೊಮ್ಮಕ್ಕಳಾದ

**ಮೈಸೂರು ಕಾರ್ತಿಕ್**
**ಮಾಸ್ಟರ್ ಸುಮಂತ್**

ಮೃದಂಗ
**ವಿದ್ವಾನ್ ಕಲೈಮಾಮಣಿ**
**ತಿರುವಾರೂರು ಭಕ್ತವತ್ಸಲಂ**

ಘಟಂ
**ವಿದ್ವಾನ್ ಗಿರಿಧರ್ ಉಡುಪ**
**ಬೆಂಗಳೂರು**

### ತಮಗೆ ಆದರದ ಸ್ವಾಗತ

ಫೋನ್: 0821-2548220, 2548221
ಫ್ಯಾಕ್ಸ್: 0821-2548219, ಇಮೇಲ್: jssashram@yahoo.com

# ಶ್ರೀ ಸುತ್ತೂರು ಮಠ

**ಮೈಸೂರು ಶಾಖೆ, ಚಾಮುಂಡಿ ಬೆಟ್ಟದ ತಪ್ಪಲು**

# ಬೆಳದಿಂಗಳ ಸಂಗೀತ 192

**5 ಅಕ್ಟೋಬರ್ 2017 * ಬುಧವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ
**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ



ಗಾಯನ
**ವಿದುಷಿ ಮಹಾಲಕ್ಷ್ಮಿ ಶೆಣೈ**



ಹಾರ್ಮೋನಿಯಂ
**ಪಂ. ಸತೀಶ್ ಕೊಳ್ಳಿ**

ತಬಲ
**ಪಂ. ಭೀಮಾಶಂಕರ ಬಿದನೂರು**



---

ಕಾಶೀ ಮಠದ ಪೂಜ್ಯ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರ ಆಶೀರ್ವಾದ ಪಡೆದು ಬೆಳೆದ ಶ್ರೀಮತಿ ಮಹಾಲಕ್ಷ್ಮಿ ಶೆಣೈ ಅವರದು ಅಪರೂಪದ ಪ್ರತಿಭೆ. 1999ರಿಂದ ಜೈಪುರದ ಮೋಹನ್ ವೀಣಾವಾದಕ ಪದ್ಮಭೂಷಣ ಪಂ. ವಿಷ್ಣುಮೋಹನ್ ಭಟ್‌ರವರಲ್ಲಿ ಹಿಂದೂಸ್ಥಾನಿ ಸಂಗೀತವನ್ನು ಕಲಿಯುತ್ತಿದ್ದಾರೆ. ಇವರು ಕನ್ನಡ, ಹಿಂದಿ, ಮರಾಠಿ, ತೆಲುಗು ಮತ್ತು ಕೊಂಕಣಿ ಭಾಷೆಗಳ ಹಲವಾರು ರಚನೆಗಳಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದಿಂದ ಬಿ.ಎ., ಎಂ.ಎಸ್.ಡಬ್ಲ್ಯು. ಮತ್ತು ಎಂ.ಎಸ್. ಪದವಿಗಳನ್ನು ಪಡೆದಿದ್ದಾರೆ.

ವಿದುಷಿ ಮಹಾಲಕ್ಷ್ಮಿಯವರು ಇದುವರೆಗೆ ದೇಶ ವಿದೇಶಗಳಲ್ಲಿ ಸುಮಾರು 1200ಕ್ಕೂ ಹೆಚ್ಚು ಕಚೇರಿಗಳನ್ನು ನೀಡಿದ್ದಾರೆ. ಕರ್ನಾಟಕದ ಬಹುತೇಕ ಎಲ್ಲ ನಗರಗಳಲ್ಲೂ ಇವರು ಸಂಗೀತ ಪ್ರಸ್ತುತಪಡಿಸಿರುವುದು ಒಂದು ಹೆಗ್ಗಳಿಕೆ. ವಾರಣಾಸಿಯ ಸಂಕಟಮೋಚನ ಸಂಗೀತ ಸಮಾರೋಹ್, ಮುಂಬಯಿಯ ಭೀಮಸೇನ್ ಜೋಷಿ ಸಂಸ್ಮರಣ ಉತ್ಸವ, ಗೋವಾದ ಪಂ. ಜಿತೇಂದ್ರ ಅಭಿಷೇಕ್ ಸಂಗೀತ ಉತ್ಸವ್, ಚೆನ್ನೈನ ಇಂಟರ್ ಯೂನಿವರ್ಸಿಟಿ ಕಲ್ಚರಲ್ ಫೆಸ್ಟಿವಲ್, ಪಂಚಾಕ್ಷರಿ ಗವಾಯಿ ಸಂಗೀತೋತ್ಸವಗಳಲ್ಲಿ ಹಾಗೂ ದುಬೈ, ಅಮೆರಿಕ ಮೊದಲಾದ ದೇಶಗಳಲ್ಲಿ ತಮ್ಮ ಗಾನಸುಧೆ ಹರಿಸಿದ್ದಾರೆ.

ಶ್ರೀ ಸತೀಶ್ ಕೊಳ್ಳಿಯವರು ಧಾರವಾಡದ ಪಂ. ಎಂ.ಜಿ. ಪಟವರ್ಧನ್‌ರವರ ಶಿಷ್ಯ. ಹಾರ್ಮೋನಿಯಂ ವಾದನದಲ್ಲಿ ಆಕಾಶವಾಣಿಯ ಬಿ ಹೈ ಶ್ರೇಣಿಯ ಕಲಾವಿದರಾಗಿರುವ ಇವರು ಭಾರತದ ಹಲವಾರು ಪ್ರತಿಷ್ಠಿತ ಸಂಗೀತ ಸಮ್ಮೇಳನಗಳಲ್ಲದೆ ಅಮೆರಿಕ, ಕೆನಡ ಮೊದಲಾದೆಡೆಗಳಲ್ಲೂ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ.

ಪಂ. ಭೀಮಾಶಂಕರ ಬಿದನೂರುರವರು ಪದ್ಮಭೂಷಣ ಡಾ. ಪಂ. ಪುಟ್ಟರಾಜ ಗವಾಯಿಯವರ ವೀರೇಶ್ವರ ಪುಣ್ಯಾಶ್ರಮದಲ್ಲಿ ತಬಲ ವಾದನವನ್ನು ಅಧ್ಯಯನ ಮಾಡಿದ್ದಾರೆ. ಸಂಗೀತ ಪ್ರಪಂಚದ ಹಲವಾರು ವಿದ್ವಾಂಸರ ಕಚೇರಿಗೆ ಸಹಕಾರ ನೀಡಿದ್ದಾರೆ.